

ಮಗಳೊಂದಿಗೆ ಶಾಂತರಸ

ಪ್ರೇರಣೆಯಾಗಿದ್ದರು. ಅವರ 'ಉಲಿವ ಮರ' ಕೃತಿ ಒಂದು ವಿಶಿಷ್ಟ ಸಂಶೋಧನಾ ಕೃತಿ. ಹನ್ನೆರಡು ತಿಂಗಳು ಋತುಮಾನ ಅನುಸಾರ ಪ್ರಕೃತಿಯಲ್ಲಿ ಆಗುವ ಬದಲಾವಣೆಯ ಹಿನ್ನೆಲೆಯಲ್ಲಿ ಶ್ರೀಕೃಷ್ಣನ ಲೀಲೆಯನ್ನು ಹೇಳುವ ಕಲ್ಲೂರಿನ ಲಿಂಗಣ್ಣ ಒಡೆಯರ್ ಅವರ 'ಭಾರಮಾಸ' ಕೃತಿ ಹೊರಗೆ ತಂದಿದ್ದು ಶಾಂತರಸರೆ.

ಶಾಂತರಸರ ಅಕ್ಕ ಬೂದೆಮ್ಮ ಆಗಾಗ ರಾಯಚೂರಿನಿಂದ ಕಲಬುರ್ಗಿಯ ಮನೆಗೆ ಬರುತ್ತಿದ್ದರು. 'ಬಾ, ಈಗ ಬಂದ್ಯಾ' ಎಂದು ಇಬ್ಬರೂ ಕೆಲಕಾಲ ಮೌನವಹಿಸಿ ಕಂಗಳಲ್ಲೇ ಮಾತಾಡುತ್ತಿದ್ದರು. ಇಬ್ಬರ ಕಣ್ಣುಗಳೂ ನೀರಾಡುತ್ತಿದ್ದವು. ಬೂದೆಮ್ಮನವರು ಶಾಂತರಸರ ಅಕ್ಕ ಆಗಿರಲಿಲ್ಲ, ತಾಯಿ ಆಗಿದ್ದರು. ಚಿಕ್ಕವರಿದ್ದಾಗಲೇ ತಾಯಿಯನ್ನು ಕಳೆದುಕೊಂಡಿದ್ದ ಶಾಂತರಸರಿಗೆ ಬೂದೆಮ್ಮನೇ ತಾಯಿಯಾಗಿದ್ದಳು. ತಮ್ಮ ಎಂಬತ್ತನೇ ವಯಸ್ಸಿನವರೆಗೂ ಅಕ್ಕನ ಜೊತೆ ಅನ್ಯೋನ್ಯ ಸಂಬಂಧವನ್ನು ಇಟ್ಟುಕೊಂಡಿದ್ದರು.

ಶಾಂತರಸರ ಕಾವ್ಯ ಮತ್ತು ಗಜಲ್‌ಗಳಲ್ಲಿ ಒಂದು ಅಪರೂಪದ ಸಂಗತಿ ಭಾವಭಿತ್ತಿಯಾಗಿ ಗಮನಸೆಳೆಯುತ್ತದೆ. ಅದು, ಚಂದದಿಂದ ಸ್ವಚ್ಛಂದವಾಗುತ್ತಿದ್ದ ಭಾವವಿನ್ಯಾಸ. ಅವರು ಪಂಚಾಕ್ಷರ ಗವಾಯಿಗಳ ಬಗ್ಗೆ ಬರೆದ ಪದ್ಯದಲ್ಲಿನ, 'ಸಂಗೀತ ಶಾರದೆಗೆ ನೀನು ಕಂಗಳು ಕೊಟ್ಟು ಕುರುಡನಾಗಿ ಹುಟ್ಟಿದೆ' ಎನ್ನುವ ಸಾಲು ಸದಾ ಕಾಡುವಂತಹದ್ದು.

ಬಂದವರು ಒಂದು ದಿನ ಮರಳಿ ಹೋಗಲೇ ಬೇಕಲ್ಲ
ಅರಿಯದಿದ್ದರು ದಾರಿ ಹೊರಳಿ ಹೋಗಲೇಬೇಕಲ್ಲ.
ಕರೆದು ತಂದವರು ಯಾರೋ ಜೊತೆಗೆ ಇದ್ದವರು
ಯಾರೋ!
ಲೆಕ್ಕ ಮುಗಿಯುವುದಿಲ್ಲ ಮರಳಿ ಹೋಗಲೇ
ಬೇಕಲ್ಲ
ಸಾವಿನ ಮನೆಗೆ ಹೋಗುವ ಅನಿವಾರ್ಯತೆಯ
ಆರ್ದ್ರತೆಯ ಸಾಲುಗಳಾಗಲಿ,